ಅವಳು ದಿಗ್ಭ್ರಾಂತಳಾಗಿ 'ಏನಂದೆ?' ಎಂದಳು.

'ಮತ್ತೇನು? ವಾಸನೆ ಬರುವುದು ಅಂದರೇನು? ಅವನು ನಿನ್ನ ಪಕ್ಕದಲ್ಲೇ ಇದ್ದಾನೆ ಅನ್ನುವ ಹಾಗೆ...'

ಅವನ ಕಡೆ ವಿರಕ್ತಿಯಿಂದ ನೋಡುತ್ತ 'ನೀನೆಷ್ಟು ಕೀಳಾಗಿ ಮಾತಾಡುತ್ತೀಯಾ ಅನ್ನುವುದು ನಿನಗೇ ಅರ್ಥವಾಗ್ತಿದೆಯೇನು?' ಎಂದಳು.

ವಾತಾವರಣವನ್ನು ತಣ್ಣಗಾಗಿಸುವ ಪ್ರಯತ್ನದಲ್ಲಿ 'ನೋಡು ಕಲ್ಯಾಣೀ, ಮನಸ್ಸಿನಲ್ಲಿ ಗಂಧದ ಮರ ಬೆಳೆಸಿಕೊಂಡರೆ ಯಾವ ವಾಸನೆ ಬರುವುದಿಲ್ಲ' ಎಂದನು.

ಅವಳ ಕೋಪ ತಣ್ಣಗಾಗಲಿಲ್ಲ. 'ಹೌದಾ? ಹಾಗಾದರೆ ನಿನ್ನ ಮನಸ್ಸಿನಲ್ಲಿ ಬೇವಿನಮರ ಬೆಳೆಸಿಕೋ, ಯಾವ ಕ್ರಿಮಿಕೀಟಗಳು ಬರುವುದಿಲ್ಲ' ಎಂದಳು.

'ನೀನೆಷ್ಟು ಸ್ಟುಪಿಡ್ಡಾಗಿ ಮಾತಾಡ್ತಿದ್ದೀಯ ಗೊತ್ತಾ?'

'ಹೆಂಡತಿಯ ಮನಸ್ಸನ್ನು ಅರ್ಥ ಮಾಡಿಕೊಳ್ಳದವನಿಗಿಂತ ದೊಡ್ಡ ಸ್ಟುಪಿಡ್ ಯಾರೂ ಇಲ್ಲ' ಎಂದಳು... ಅಷ್ಟೇ. ಸಿಟ್ಟು ತಡೆಯಲಾಗದೆ ಅವಳ ಕೆನ್ನೆಗೆ ಬಾರಿಸಿದನು ಕೃಷ್ಣ.

ಕಿಟಕಿಯಿಂದ ಅವರ ಜಗಳ ನೋಡುತ್ತಿದ್ದ ಪ್ರೇಮ್ ಹಿಂದಕ್ಕೆ ಹೋದನು.

—16—

ಗಫಾರ್‌ಖಾನ್ ಕಸಿವಿಸಿಗೊಂಡನು. ಸಣ್ಣ ಕೋಣೆ. ಕಾಲು ಚಾಚುವುದಕ್ಕೂ ಜಾಗವಿರಲಿಲ್ಲ. ನಿಶ್ಯಬ್ದ

ಇನ್ನೊಬ್ಬ ಮನುಷ್ಯನ ಮುಖ ನೋಡಬೇಕೆಂದರೂ ಅಲ್ಲಿ ಯಾರೂ ಇರಲಿಲ್ಲ. ಅವನನ್ನು ಆ ಕೋಣೆಯಲ್ಲಿಟ್ಟು ಎಷ್ಟು ಕಾಲವಾಯಿತೋ ಗೊತ್ತಿಲ್ಲ. ಮೊದಲು ನೆನಪಿಟ್ಟುಕೊಳ್ಳುವ ಸಲುವಾಗಿ ಗೋಡೆಯ ಮೇಲೆ ಗೆರೆ ಎಳೆಯುತ್ತಿದ್ದನು. ಕೆಲ ದಿನಗಳ ನಂತರ ಆ ಅಭ್ಯಾಸ ತೊರೆದನು.

ಬಾಗಿಲ ಪಕ್ಕದಲ್ಲಿ ಗೋಡೆಯಲ್ಲೊಂದು ರಂಧ್ರವಿತ್ತು. ಅದರ ಮೂಲಕ ದಿನಕ್ಕೆ ಎರಡು ಸಾರಿ ಸಣ್ಣ ತಟ್ಟೆಯೊಂದು ಒಳಗೆ ಬರುತ್ತಿತ್ತು. ತಟ್ಟೆಯಲ್ಲಿ ಅನ್ನದ ಮುದ್ದೆ ಇರುತ್ತಿತ್ತು. ಅದನ್ನು ತಿನ್ನುವ ಪ್ರಯತ್ನ ಮಾಡುತ್ತಿದ್ದನು. ಆದರೆ ಅದು ದಕ್ಕದೆ ವಾಂತಿಯಾಗಿ ಬಿಡುತ್ತಿತ್ತು.

ಒಂದು ಗ್ಲಾಸ್ ನೀರು, ಇನ್ನು ಬೇರೆ ಯಾವುದಕ್ಕೂ ನೀರಿರುತ್ತಿರಲಿಲ್ಲ. ಎಲ್ಲವೂ ಆ ಕೋಣೆಯಲ್ಲೇ.

ಅವನಿಗೆ ಸ್ವಲ್ಪ ಸ್ವಲ್ಪವಾಗಿ ಹುಚ್ಚು ಹಿಡಿಯುತ್ತಿತ್ತು. ಮಿಜ್ರಾಡಿನ್‌ನ ಟೆಕ್ನಿಕ್ ಅದು. ರಹಸ್ಯಗಳನ್ನು ಕಕ್ಕಿಸುವುದಕ್ಕೆ ಮೊದಲು ಕೈದಿಗೆ ಹುಚ್ಚು ಹಿಡಿಯುವಂತೆ ಮಾಡುವುದು!

ಆ ರೀತಿ ಕೆಲವು ದಿನಗಳು ಕಳೆದ ಮೇಲೆ ಒಂದು ದಿನ ಬಾಗಿಲು ನಿಧಾನವಾಗಿ ತೆರೆದುಕೊಂಡಿತು. ಅಷ್ಟು ಮಾತ್ರದ ಬೆಳಕನ್ನೂ ಸಹಿಸಲು ಅವನಿಗಾಗಲಿಲ್ಲ. ಗಟ್ಟಿಯಾಗಿ ಕಿರುಚುತ್ತ ಉಗುರುಗಳಿಂದ ಗೋಡೆಯನ್ನು ಗೀಚಿದನು. ಇಬ್ಬರು ವ್ಯಕ್ತಿಗಳು ಬಂದು ಅವನ ಹೆಗಲನ್ನು ಹಿಡಿದುಕೊಂಡು ಹೊರಗೆ ಕರೆತಂದರು.

ಕಾಲುಗಳು ಸ್ವಾಧೀನದಲ್ಲಿ ಇರಲಿಲ್ಲ. ಶವವನ್ನು ಹೊತ್ತುಕೊಳ್ಳುವ ಹಾಗೆ ಅವನನ್ನು ಹೊತ್ತು ತಂದು ವಿಶಾಲವಾದ ಕೋಣೆಯಲ್ಲಿ ಹಾಕಿದರು. ಅಲ್ಲಿ ಇರ್ಫಾನ್ ಇದ್ದನು, ಮಿಜ್ರಾಡಿನ್ ಬಲಗೈ ಭಂಟ.

ಕಾಲಲ್ಲಿ ಶಕ್ತಿಯಿಲ್ಲದೆ ಅವನ ಮುಂದೆ ಕಪ್ಪೆಯಂತೆ ಬಿದ್ದಿದ್ದನು ಗಫಾರ್‌ಖಾನ್.

'ಬಹಳ ಕಾಲದ ನಂತರ ಬೆಳಕಿಗೆ ಬಂದಿದ್ದೀಯ, ಕತ್ತಲೆ ಹೇಗಿತ್ತು?' ಇರ್ಫಾನ್ ಧ್ವನಿಯಲ್ಲಿ ವ್ಯಂಗ್ಯವಿತ್ತು.

ಗಫಾರ್‌ಖಾನ್ ಮಾತನಾಡಲಿಲ್ಲ.

'ಮತ್ತೆ ಕತ್ತಲ ಕೋಣೆಗೆ ಹೋಗಬಾರದು ಅಂದರೆ ಹೇಳು. ನಿನಗೆ ಸಹಾಯ ಮಾಡುತ್ತಿರುವ ಪೊಲೀಸ್ ಇನ್ಫಾರ್ಮರ್‌ಗಳು ಯಾರು? ಅವರ ಅಡ್ರೆಸ್ ಏನು?'

ಗಫಾರ್ ಮೌನವಾಗಿದ್ದನು.

ಇರ್ಫಾನ್ ಕುರ್ಚಿಯಿಂದೆದ್ದು ಆ ವೃದ್ಧನನ್ನು ಕಾಲಿನಿಂದ ಬಲವಾಗಿ ಒದ್ದನು. ಕಿರುಚುವುದಕ್ಕೂ ಶಕ್ತಿಯಿರಲಿಲ್ಲ, ಬಾಯಿಂದ ಸಣ್ಣದಾಗಿ ನರಳಿಕೆ ಸದ್ದು ಹೊರಬಂತಷ್ಟೇ.

'ನಿನ್ನ ಹೆಂಡತಿ ಆತ್ಮಹತ್ಯೆ ಮಾಡಿಕೊಂಡಳು. ನಿನ್ನ ಮಗಳು ಯಾವನ ಜೊತೆಗೋ ಓಡಿ ಹೋದಳು. ಇನ್ನೂ ನಿನಗ್ಯಾಕೋ ದೇಶಭಕ್ತಿ? ದೇಶವನ್ನು ಬಿಡು, ನಮ್ಮ ಮತಕ್ಕೆ ಸಹಾಯ ಮಾಡು... ಹೇಳೋ ಬೇವಕೂಫ್' ಮುಂದಕ್ಕೆ ಬಾಗಿ ಕಿರುಚಿದನು ಇರ್ಫಾನ್.

ಮತ್ತೆ ಮೌನ.

ಇರ್ಫಾನ್ ಅವನ ಕೈಗಳನ್ನು ಎಳೆದುಕೊಂಡು ಬೆರಳುಗಳನ್ನು ಹಿಂದಕ್ಕೆ ಬಾಗಿಸುತ್ತಾ 'ಸಾಲಾ.... ನಿನ್ನ ಬಾಯಿ ಹೇಗೆ ಬಿಡಿಸಬೇಕು ಅಂತ ನಮಗೆ ಗೊತ್ತಿದೆ. ಮೊದಲೇ ನೀನು ಮುದುಕ, ಹಿಂಸೆ ಸಹಿಸಲಾರೆ, ನಿಜ ಹೇಳು' ಎಂದನು.

'ಜಜಕಲ್ಲಹು ಖೈರ್—ಸಲ್ ಅಲ್ಲಹು ಅಲೈಹಿ ವಸಲಾಂ... ಬಿಸ್ಮಿಲ್ಲಾ ಹೀರ್ ರಹ್ಮಾನಿರ್ ರಹೀಂ 'ಸಣ್ಣ ಸ್ವರದಲ್ಲಿ ಹೇಳಿದನು ಗಫಾರ್ ಖಾನ್.

'ಏನು ಬೈಯುತ್ತಿದ್ದೀಯಾ?'

ಅಷ್ಟು ನೋವಿನಲ್ಲೂ ಗಫಾರ್ ನಕ್ಕನು, 'ಇಲ್ಲವೋ, ಅಲ್ಲಾಹನ ಕರುಣೆ ನಿಮ್ಮ ಮೇಲಿರಲಿ ಅಂತ ಪ್ರಾರ್ಥನೆ ಮಾಡಿದೆ. ಕುರಾನ್ ತಿಳಿಯದ ನೀನು ಅದೆಂಥಾ ಭಯೋತ್ಪಾದಕನೋ? ಮತವನ್ನು ಅದು ಹೇಗೆ ಉಳಿಸುತ್ತೀಯೋ?'

ಇರ್ಫಾನ್ ಸ್ವಲ್ಪ ಗಾಬರಿಯಾಗಿ, ಚೇತರಿಸಿಕೊಳ್ಳುತ್ತ 'ಇವನನ್ನು ಎಳೆದೊಯ್ದು ಚೆನ್ನಾಗಿ ತದುಕಿರಿ.... ಲೇ ಜಾನ್ ಇಸೇ' ಎಂದು ಕಿರುಚಿದನು.

***

ಸಾಯಂಕಾಲ ಐದಾಗಿತ್ತು. ಕಲ್ಯಾಣಿ ಮನೆ ಮುಂದೆ ನೀರು ಚಿಮುಕಿಸುತ್ತಾ ಇದ್ದಾಗ ಹಿಂದಿನಿಂದ 'ಕಂಗ್ರಾಟ್ಸ್' ಎಂದಿದ್ದು ಕೇಳಿಸಿ ತಿರುಗಿ ನೋಡಿದಳು. ಅಲ್ಲಿ ಪ್ರೇಮ್ ನಿಂತಿದ್ದನು.

ಅವಳಿಗೆ ಅರ್ಥವಾಗಲಿಲ್ಲ. 'ಏತಕ್ಕೆ?' ಎಂದು ಕೇಳಿದನು.

'ನಿಮ್ಮ ತಂದೆ ಕ್ಷೇಮವಾಗಿರುವ ವಿಷಯ ತಿಳಿದಿದ್ದಕ್ಕೆ'

ಅವಳು ಆಶ್ಚರ್ಯದಿಂದ 'ಅವರ ವಿಷಯ ನಿನಗೆ ಹೇಗೆ ತಿಳಿಯಿತು?' ಎಂದು ಕೇಳಿದಳು.

'ನಿನ್ನೆ ರಾತ್ರಿ ಬಾರ್‌ನಲ್ಲಿ ನಿಮ್ಮ ಯಜಮಾನರು ಹೇಳಿದರು. ಕುಡಿತಾ ಕೂತಿದ್ದಾಗ' ಎಂದು ಒಂದು ರಹಸ್ಯವನ್ನು ಹಂಚಿಕೊಳ್ಳುತ್ತಿರುವ ಹಾಗೆ.

ಅವಳ ಮುಖ ಕೆಂಪಾಯಿತು. ಬೇರೇನೋ ಹೇಳಲು ಹೊರಟವಳು 'ಸರಿ, ಥ್ಯಾಂಕ್ಸ್' ಎಂದು ಚುಟುಕಾಗಿ ಹೇಳಿದಳು.

ಮತ್ತೆ ನನಗೆ ಪಾರ್ಟಿ?'

'ನನ್ನ ಗಂಡನ್ನ ಕೇಳು, ಕೊಡ್ತಾನೆ' ಅವಳ ಧ್ವನಿಯಲ್ಲಿ ದ್ವೇಷದ ಛಾಯೆ ಇತ್ತು, ಆದರೆ ಅದನ್ನು ಅವನು ಗಮನಿಸಲಿಲ್ಲ.

'ನೀನಂದರೆ ನನಗೆ ತುಂಬಾ ಇಷ್ಟ ಕಲ್ಯಾಣಿ, ಮೈ ಮೈಂಡ್, ಮೈ ಬಾಡಿ, ಲವ್ಸ್ ಯೂ' ಎಂದನು.

ಅವನಷ್ಟು ಸಡನ್ನಾಗಿ ಹೇಳಿದಾಗ ವಿಸ್ಮಯಗೊಂಡು, ಕ್ಷಣದಲ್ಲೇ ಸಮಾಧಾನ ಮಾಡಿಕೊಂಡು 'ನೀನೆಲ್ಲಿ ಓದುತ್ತಿದ್ದೀಯ?' ಎಂದಳು.

ಅವಳು ಹೇಳಿದನು.

'ನಿಮ್ಮ ಕಾಲೇಜ್‌ಗೆ ಬಾಂಬ್ ಇಡಬೇಕು. ಮೊದಲು ಇಂಗ್ಲೀಷ್ ಸರಿಯಾಗಿ ಕಲಿತುಕೋ, 'ಲವ್ಸ್' ಅಲ್ಲ 'ಲವ್' ಅನ್ನಬೇಕು'

'ನೀನು ಏನಾದರೂ ಅನ್ನು, ನನಗೆ ನೀನು ಬೇಕು. 'ನಿನ್ನ ಕಿಸ್ ಬೇಕು'

'ನಿನಗೆ ಎಡಗೆನ್ನೆ ಇಷ್ಟನಾ? ಬಲಗೆನ್ನೆ ಇಷ್ಟನಾ?'

'ಕಿಸ್‌ಗಾ?'

'ಅಲ್ಲ ಚಪ್ಪಲಿಯಿಂದ ಹೊಡೆಯುವುದಕ್ಕೆ' ಎಂದು ಗರ್ಜಿಸಿ ಉಬ್ಬಿಳಿಸಿದಳು.

ಅವಳ ಆ ಮಾತನ್ನು ಕೂಡ ಲೆಕ್ಕಿಸದೆ ನಗುತ್ತಾ 'ಏನು? ಬಯಕೆನಾ' ಎಂದನು ಪ್ರೇಮ್.

'ಅಲ್ಲ— ನಿನ್ನ ಕಂಡರೆ ಅಸಹ್ಯವಾಗಿ ವಾಂತಿ ಬರ್ತಿದೆ' ಎಂದು ಸಿಟ್ಟಿನಿಂದ ಒಳಗೆ ಹೋಗಿಬಿಟ್ಟಳು. ಅವಳ ಹೋದ ಕಡೆಯೇ ನೋಡುತ್ತಾ 'ನೀನು ನನ್ನ ಪ್ರೀತಿಸ್ತಾ ಇದ್ದೀಯ ಕಲ್ಯಾಣಿ, ಅದು ನನಗೆ ಚೆನ್ನಾಗಿ ಗೊತ್ತು' ಎಂದು ತನ್ನಲ್ಲೇ ಹೇಳಿಕೊಂಡನು.

## ಎರಿಟೋಮೇನಿಯಾ

ಇದೊಂದು ಮಾನಸಿಕ ವ್ಯಾಧಿ. ಈ ವ್ಯಾಧಿ ಇರುವವರು ಪ್ರಧಾನಮಂತ್ರಿಯಿಂದ ಹಿಡಿದು ಸಿನಿಮಾ ನಟರವರೆಗೆ ಯಾರೋ ತಮ್ಮನ್ನು ಪ್ರೀತಿಸುತ್ತಾರೆ ಎಂದು ಮನಸ್ಫೂರ್ತಿಯಾಗಿ ನಂಬುತ್ತಾರೆ. ಎದುರಿನ ವ್ಯಕ್ತಿಯಿಂದ ಯಾವ ಪ್ರತಿಸ್ಪಂದನೆ ಇರದಿದ್ದರೂ, ಅವರು ಬೈದರೂ, ತಲೆಗೆ ಹಚ್ಚಿಕೊಳ್ಳುವುದಿಲ್ಲ. ಅದೆಲ್ಲ ಪ್ರೀತಿಯೇ ಅಂದುಕೊಳ್ಳುತ್ತಾರೆ. ಬಹುತೇಕ ಇದು ವಯಸ್ಸು ಮೀರಿದ ಅವಿವಾಹಿತ ಹೆಣ್ಣುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಕೆಲ ಕಾಲದ ನಂತರ ಈ ಭ್ರಾಂತಿ ಎಲ್ಲಿಯವರೆಗೆ ಹೋಗುತ್ತದೆಂದರೆ ಆ ಸೆಲಬ್ರಿಟಿಯಿಂದ ತಮಗೆ ಮೆಸೇಜ್‌ಗಳು, ಫೋನ್ ಕರೆಗಳು ಬರುತ್ತಿವೆ ಎಂದು ಪ್ರಾಮಾಣಿಕವಾಗಿ ಭಾವಿಸುತ್ತಾರೆ.